

### ಕಾಳಜಿ-ಪ್ರಯತ್ನ ಅಗತ್ಯ

'ಇತ್ತೀಚೆಗೆ ನಾನು ಧಾರವಾಡದಲ್ಲಿ ಮನೆಯಲ್ಲಿದ್ದಾಗ ಹಿಂಭಾಗದಲ್ಲಿರುವ ಉದ್ಯಾನಕ್ಕೆ ಅನಿರೀಕ್ಷಿತವಾಗಿ ಬೆಂಕಿ ಬಿತ್ತು. ಬಹಳ ಆಸೆಪಟ್ಟು, ನಿರೀಕ್ಷೆ ಮತ್ತು ಪ್ರೀತಿಯಿಂದ ಬೆಳೆಸಿದ ತೋಟವದು. ಯಾರೋ ದಾರಿಹೋಕರು ಸುಮಾರು 100 ಮೀಟರ್ ದೂರದಲ್ಲಿ ಸೇದಿ ಬಿಸಾಡಿದ ಸಿಗರೇಟ್ ತುಂಡಿನಿಂದ ಹೊತ್ತಿಕೊಂಡ ಬೆಂಕಿಯು ಕ್ಷಣಮಾತ್ರದಲ್ಲಿ ವ್ಯಾಪಿಸಿಕೊಂಡು ಅಪಾಯ ಒಡ್ಡಿತು.

ಬೇಸಿಗೆಯಲ್ಲಿ, ಅದರಲ್ಲೂ ಸದ್ಯ ಗರಿಷ್ಠ ಉಷ್ಣಾಂಶ ಇರುವುದರಿಂದ ಅರಣ್ಯ ಪ್ರದೇಶದಲ್ಲಿ ಅಲ್ಲಲ್ಲಿ ಕಾಳ್ಗಿಚ್ಚು ಕಾಣಿಸಿಕೊಳ್ಳುತ್ತಿದೆ. ಬೆಂಕಿಯನ್ನು ಹತೋಟಿಗೆ ತರುವ ಮೊದಲೇ ಅದು ವ್ಯಾಪಕವಾಗಿ ಮತ್ತು ವೇಗವಾಗಿ ಹರಡುವ ಸಾಧ್ಯತೆ ಹೆಚ್ಚಾಗಿದೆ. ಬೆಂಕಿಯ ವೇಗವನ್ನು ತಡೆಯಲು ಕಷ್ಟ. ಆದರೆ, ಅದರ ಮೂಲವನ್ನು ಹತ್ತಿಕ್ಕಲು ಸಾಧ್ಯವಿದೆ. ಅರಣ್ಯಕ್ಕೆ ಬೆಂಕಿ ಬಿದ್ದಾಗ ಅದನ್ನು ನಂದಿಸಿ ಹತೋಟಿಗೆ ತರಲು ನಮ್ಮಲ್ಲಿರುವ ಉಪಕರಣಗಳು ಸಾಲದು. ಬೇರೆ ದೇಶಗಳಲ್ಲಿ ಅತ್ಯಾಧುನಿಕ ಬೆಂಕಿ ನಂದಿಸುವ ಯಂತ್ರಗಳು, ಆಧುನಿಕ ಸಾಧನಗಳೂ ಇವೆ. ಸರ್ಕಾರ ಈ ಬಗ್ಗೆ ಗಮನ ಹರಿಸಬೇಕು. ಸರ್ಕಾರಿ ಅಧಿಕಾರಿಗಳೊಂದಿಗೆ ಪ್ರಜ್ಞಾವಂತ ನಾಗರಿಕರು ಕೂಡ ಕಾಳ್ಗಿಚ್ಚು ನಿಯಂತ್ರಣದ ಬಗ್ಗೆ ಕಾಳಜಿ ಹಾಗೂ ಎಚ್ಚರಿಕೆ ವಹಿಸಬೇಕು.

**-ಡಿ. ವೀರೇಂದ್ರ ಹೆಗ್ಗಡೆ**
ಧರ್ಮಾಧಿಕಾರಿ, ಶ್ರೀ ಕ್ಷೇತ್ರ ಧರ್ಮಸ್ಥಳ

ದಿಕ್ಕೆಟ್ಟು ಹೋಗಿವೆ. ಅತ್ತಲಿಂದ ಶಿರಾಡಿ ಘಾಟ್ ರಸ್ತೆ ಕಾಮಗಾರಿಯ ಗದ್ದಲಗಳು, ಇತ್ತಲಿಂದ ಬೆಂಕಿಯ ಬಿಸಿಗಾಳಿ. ಸಾಮಾನ್ಯವಾಗಿ ಪ್ರತೀವರ್ಷ ಕುದುರೆಮುಖ ವನ್ಯಜೀವಿ ಅರಣ್ಯದಿಂದ ಚಾರ್ಮಾಡಿ ಅರಣ್ಯ, ಮತ್ತು ಶಿಶಿಲ ಮಾರ್ಗವಾಗಿ ಪುಷ್ಪಗಿರಿ ವನ್ಯಧಾಮಕ್ಕೆ ಹೋಗುವುದು ವಾಡಿಕೆ. ಬೇಸಿಗೆಯಲ್ಲಿ ಹೀಗೆ ಪ್ರಯಾಣ ಆರಂಭಿಸಿರುವ ಆನೆಗಳು ಸಾಲಾಗಿ ಸಾಗುತ್ತಿರುವಾಗ ಶಿರಾಡಿಯಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದ್ದುದರಿಂದ ಮತ್ತೊಂದು ದಾರಿ ಹಿಡಿದಿವೆ. ತೋಚಿದ ಮತ್ತೊಂದು ದಾರಿಯೆಂದರೆ, ಅದು ಕಾಳ್ಗಿಚ್ಚು ಉರಿಯುತ್ತಿರುವ ಬಿಸಿ ಬೆಟ್ಟದ ತಪ್ಪಲು. ಅಷ್ಟರಲ್ಲಿ ಹಿಂದಿನಿಂದ ಮತ್ತೆರಡು ಹಿಂಡುಗಳು ದಾರಿ ಕಾಣದೆ ಅತ್ತಿತ್ತ ಚಲಿಸಲು ಶುರು ಮಾಡಿವೆ. ಹೀಗೆ ಆನೆಗಳ ಮೂರು ಹಿಂಡುಗಳು ದಿಕ್ಕೆಟ್ಟು ಅತ್ತಿತ್ತ ಅಲೆದಾಡುತ್ತ, ಕೊನೆಗೆ ಪರಸ್ಪರ ಮುಖಾಮುಖಿಯಾಗಿವೆ. ಮೊದಲೇ ದಾರಿಗಾಣದೆ ಕಂಗಾಲಾದ ಆನೆಗಳು, ಇದೀಗ ರೊಚ್ಚಿಗೆದ್ದು ಪರಸ್ಪರ ಜಗಳಕ್ಕೆ ನಿಂತವು.

ಭಯಗೊಂಡು ಓಡುತ್ತಿರುವ ಆನೆಗಳನ್ನು




ಕಾಳ್ಗಿಚ್ಚು ವಿರುದ್ಧ ಮಡಿಕೇರಿಯಲ್ಲಿ
ನಡೆದ ಜನಜಾಗೃತಿ ಕಾರ್ಯಕ್ರಮ